# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ ನೂತನವಾಗಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸುವುದು ಹಾಗೂ ಈ ಸಂಬಂಧ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಅವಶ್ಯವಿರುವ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಕಾರ್ಮಿಕ ಇಲಾಖೆಯ ಕಡತ ಸಂಖ್ಯೆ ಕಾಇ 171 ಇಟಿಐ 2016.

* * * * * *

**ಪ್ರಸ್ತಾವನೆ :**

2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ನೂತನವಾಗಿ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲು ಘೋಷಿಸಲಾಗಿದ್ದು, ಆಯವ್ಯಯ ಭಾಷಣದ ಕಂಡಿಕೆ 367 ರಲ್ಲಿ ಈ ಕೆಳಕಂಡ ಘೋಷಣೆಯನ್ನು ಮಾಡಲಾಗಿದೆ :

> "ಉದ್ಯೋಗಾವಕಾಶ ಹೆಚ್ಚಿಸುವ ಏಕೈಕ ಉದ್ದೇಶದಿಂದ ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೇ ಇಲಾಖೆಯಡಿ ತರಲು ಉದ್ದೇಶಿಸಿದ್ದು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲಾಗುವುದು. ಇದು ಮಾನ್ಯ ಮುಖ್ಯಮಂತ್ರಿಗಳ ನೇರ ನಿಯಂತ್ರಣದಲ್ಲಿ ಇರುತ್ತದೆ. ಇದು ಕೌಶಲ್ಯ ಅಭಿವೃದ್ಧಿಯನ್ನು ತೀವ್ರ ಗತಿಯಲ್ಲಿ (Mission Mode) ಹೆಚ್ಚಿಸುವ ದಿಸೆಯಲ್ಲಿ ಸಾಧ್ಯವಾಗುವುದರೊಂದಿಗೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸುವುದನ್ನು ಖಾತರಿಪಡಿಸುತ್ತದೆ. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ವಿಧಾನಗಳಲ್ಲಿ ಹಣಕಾಸು ದೊರಕಿಸುವ ಸಾಧ್ಯತೆಗಳನ್ನು ಸಹ ಈ ಧ್ಯೇಯವು ಕಂಡುಕೊಳ್ಳಲಿದೆ. ಈ ಉದ್ದೇಶಕ್ಕಾಗಿ 2016-17ನೇ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುವುದು".

ಪ್ರಸಕ್ತ ವ್ಯವಸ್ಥೆಯಲ್ಲಿ ರಾಜ್ಯದ ಅನೇಕ ಇಲಾಖೆಗಳು, ನಿಗಮ ಮಂಡಳಿಗಳು ಕೌಶಲಾಭಿವೃದ್ಧಿ ತರಬೇತಿಯನ್ನು ನೀಡುತ್ತಿರುತ್ತವೆ. ಆದರೆ ಈ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಪುನರುಕ್ತಿಯಾಗುವ (duplication) ಸಾಧ್ಯತೆ ಇದ್ದು, ಇವುಗಳ ಸೂಕ್ತ ಮೇಲ್ವಿಚಾರಣೆ ಕೈಗೊಳ್ಳುವ "ಏಕೀಕೃತ ಮೇಲ್ವಿಚಾರಣಾ ವ್ಯವಸ್ಥೆ" ಜಾರಿಗೊಳಿಸಬೇಕಾಗಿದೆ. ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಯೋಗಾವಕಾಶ ಹೆಚ್ಚಿಸುವ ಉದ್ದೇಶದಿಂದ ಒಂದೇ ಇಲಾಖೆಯಡಿಯಲ್ಲಿ ತರಲು ಸರ್ಕಾರವು ನಿರ್ಣಯಿಸಿದೆ. ಇದರಿಂದ ರಾಜ್ಯದ ಯುವಜನತೆಗೆ, ದುಡಿಯುವ ಕೈಗಳಿಗೆ ಉತ್ತಮ ಬೆಳವಣಿಗೆಗೆ ಹಾಗೂ ಅದರಲ್ಲೂ ಸಮಾಜದ ಅಂಚಿನಲ್ಲಿರುವ ಗುಂಪುಗಳ ಅಂತರ್ಗತ ಬೆಳವಣಿಗೆಗೆ ಇದು ಅವಶ್ಯವಿದ್ದು ಯೋಗ್ಯ ಕೆಲಸ ಹಾಗೂ ಜೀವನೋಪಾಯ ನಿರ್ವಹಣೆಗೆ ಅತ್ಯಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ವ್ಯವಸ್ಥೆಯನ್ನು ಏಕೀಕೃತ ಮೇಲ್ವಿಚಾರಣೆಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಯೋಜಿಸಿದ್ದು, ಇದರಿಂದ ಗ್ರಾಮಮಟ್ಟದಿಂದ ಹಿಡಿದು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದವರೆಗೆ ಕೌಶಲ್ಯಾಭಿವೃದ್ಧಿ ತರಬೇತಿಗೆ ಫಲಾನುಭವಿಗಳ ಆಯ್ಕೆ ಹಾಗೂ ತರಬೇತಿ ನೀಡಲು ಸಹಾಯಕವಾಗಲಿದೆ.

ಈ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಸರ್ಕಾರವು ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಎಂಬ ಹೊಸ ಇಲಾಖೆಯನ್ನು ಸೃಜಿಸಲು ಸರ್ಕಾರವು ನಿರ್ಧರಿಸಿದೆ ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮಾದರಿಯನ್ವಯ ಕರ್ನಾಟಕ ಸರ್ಕಾರ ಸಚಿವಾಲಯ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಸೃಜಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 164 ಸಲುಸೇ 2016,**
**ಬೆಂಗಳೂರು, ದಿನಾಂಕ 24-9-2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ನಿಯಂತ್ರಣಕ್ಕೆ ಒಳಪಟ್ಟಂತೆ ರಾಜ್ಯದಲ್ಲಿ ನೂತನವಾಗಿ **"ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ" (Department for Skill Development, Entrepreneurship and Livelihood)** ಯನ್ನು ಸೃಜಿಸಲಾಗಿದೆ. ಈ ಇಲಾಖೆಗೆ ಕರ್ನಾಟಕ ಸರ್ಕಾರ ಸಚಿವಾಲಯ ಮಟ್ಟದಲ್ಲಿ ಸಚಿವಾಲಯದ ಸಿಬ್ಬಂದಿ ಮಾದರಿಯನ್ವಯ ಅವಶ್ಯವಿರುವ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿದೆ :

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಕಾರ್ಯದರ್ಶಿ | 01 |
| | ಕಾರ್ಯದರ್ಶಿಯವರ ಆಪ್ತ ಶಾಖೆ | |
| | ಶೀಘ್ರಲಿಪಿಗಾರರು (ಪತ್ರಾಂಕಿತ ಆಪ್ತ ಸಹಾಯಕರು / ಹಿರಿಯ ಶೀಘ್ರಲಿಪಿಗಾರರು) (ರೂ. 20000-36300) | 02 |
| | ಭಾಷಾಂತರಕಾರರು (ಶಾಖಾಧಿಕಾರಿ / ಹಿರಿಯ ಸಹಾಯಕ) (ರೂ. 22800-43200) | 01 |
| | ಕಿರಿಯ ಸಹಾಯಕ (ರೂ. 11600-21000) | 01 |
| | ಚಾಲಕರು (ರೂ. 11600-21000) | 01 |
| | ದಲಾಯತ್ (ರೂ. 9600-14550) | 02 |

110 35

| | | |
|---|---|---|
| 2) | ಸರ್ಕಾರದ ಉಪ ಕಾರ್ಯದರ್ಶಿ<br>(ರೂ. 40050-566550) | 01 |
| | ಶೀಘ್ರಲಿಪಿಗಾರರು<br>(ಹಿರಿಯ ಶೀಘ್ರಲಿಪಿಗಾರರು / ಶೀಘ್ರಲಿಪಿಗಾರರು)<br>(ರೂ. 20000-36300) | 01 |
| | ಕಿರಿಯ ಸಹಾಯಕ<br>(ರೂ. 11600-21000) | 01 |
| | ದಲಾಯತ್<br>(ರೂ. 9600-14550) | 01 |
| 3) | ಅಧೀನ ಕಾರ್ಯದರ್ಶಿ<br>(ರೂ. 28100-50100) | 01 |
| | ಶೀಘ್ರಲಿಪಿಗಾರರು<br>(ರೂ. 20000-36300) | 01 |
| | ದಲಾಯತ್<br>(ರೂ. 9600-14550) | 01 |
| 4) | ಶಾಖಾಧಿಕಾರಿ<br>(ರೂ. 22800-43200) | 02 |
| | ಹಿರಿಯ ಸಹಾಯಕರು<br>(ರೂ. 20000-36300) | 02 |
| | ಸಹಾಯಕರು<br>(ರೂ. 16000-29600) | 04 |
| | ಕಿರಿಯ ಸಹಾಯಕರು<br>(ರೂ. 11600-21000) | 02 |
| | ಬೆರಳಚ್ಚುಗಾರರು<br>(ರೂ. 11600-21000) | 02 |
| | ದಲಾಯತ್<br>(ರೂ. 9600-14550) | 02 |
| | ಒಟ್ಟು ಹುದ್ದೆಗಳು | 29 |

ನೂತನ ಇಲಾಖೆಗೆ ವಿಷಯಗಳ ಹಂಚಿಕೆಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977 ಗೆ ಪ್ರತ್ಯೇಕ ತಿದ್ದುಪಡಿ ಹೊರಡಿಸಲಾಗುವುದು.

ಮುಂದುವರಿದು, ಈ ಇಲಾಖೆಯ ಅಧೀನದಲ್ಲಿ ಈ ಕೆಳಕಂಡ 3 ಆಯುಕ್ತಾಲಯಗಳು ಕಾರ್ಯ ನಿರ್ವಹಿಸತಕ್ಕದ್ದು :

1) **ಆಯುಕ್ತಾಲಯ, ಕೌಶಲ್ಯಾಭಿವೃದ್ಧಿಯ ಗುಣಮಟ್ಟ, ಪಠ್ಯಕ್ರಮ ಹಾಗೂ ತರಬೇತುದಾರರ ತರಬೇತಿ :**

(ವಿಷಯಗಳು : ಗುಣಮಟ್ಟ, ಪ್ರಮಾಣೀಕರಣ, ಮೌಲ್ಯಮಾಪನ, ಪಠ್ಯಕ್ರಮ ಅಭಿವೃದ್ಧಿ, ತರಬೇತುದಾರರ ತರಬೇತಿ, ಎನ್.ಎಸ್.ಕ್ಯೂ.ಎಫ್., ಎನ್.ಸಿ.ವಿ.ಟಿ. ಇತ್ಯಾದಿ.) (ಹಾಲಿ ಇರುವ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆ, ನಿಗಮ ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

34

109

2) **ಆಯುಕ್ತಾಲಯ, ಕೈಗಾರಿಕಾ ತರಬೇತಿ ಹಾಗೂ ಶಿಶಿಕ್ಷು ತರಬೇತಿ :**

ಕೈಗಾರಿಕಾ ತರಬೇತಿ ಸಂಸ್ಥೆಗಳ ಹಾಗೂ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಆಡಳಿತ ಮತ್ತು ನಿರ್ವಹಣೆ, ಶಿಶಿಕ್ಷು ತರಬೇತಿ, ಸೆಕ್ಟರ್ ಸ್ಕಿಲ್ ಕೌನ್ಸಿಲ್ ಮತ್ತು ಕೈಗಾರಿಕೆಗಳೊಂದಿಗೆ ಸಮನ್ವಯ ಮತ್ತು ಸಂಪರ್ಕ. (ಆಯುಕ್ತರು, ಉದ್ಯೋಗ ಮತ್ತು ತರಬೇತಿ ಹುದ್ದೆ ಪೂರ್ಣ ಇಲಾಖೆಯೊಂದಿಗೆ ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ. ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

3) **ಆಯುಕ್ತಾಲಯ, ಉದ್ಯಮಶೀಲತೆ ಮತ್ತು ಜೀವನೋಪಾಯ :**

ಉದ್ಯಮಶೀಲತೆ ಮತ್ತು ಅಭಿವೃದ್ಧಿ, ಇನ್ಕ್ಯುಬೇಷನ್ ಸೆಂಟರ್, ಬ್ಯಾಂಕಿಂಗ್ ಹಾಗೂ ಹಣಕಾಸು ಸಂಬಂಧಿಸಿಂತೆ ಸಮನ್ವಯ / ಸಂಪರ್ಕ, ಹಿಂದಿನ-ಮುಂದಿನ ಸಮನ್ವಯ ಸೇತುವೆ, ಪ್ರಕಟಣೆ, ಜೀವನೋಪಾಯ ಅಭಿವೃದ್ಧಿ, ಸಬಲೀಕರಣ, ಅನೌಪಚಾರಿಕ ವ್ಯವಸ್ಥೆಯ ಕೌಶಲ್ಯವರ್ಧನೆ, ಪ್ಲೇಸ್ಮೆಂಟ್ ಸೇವೆಗಳು, ವೃತ್ತಿ ಮಾರ್ಗದರ್ಶನ, ವಿದೇಶಗಳಲ್ಲಿ ಉದ್ಯೋಗಾವಕಾಶ ಇತ್ಯಾದಿ. (ಆಯುಕ್ತರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ನಿರ್ದೇಶಕರ ಹುದ್ದೆ ಹಾಗೂ ಇದರ ಕಾರ್ಯಕ್ರಮ ಅನುಷ್ಠಾನ ಸಂಬಂಧಿತ ರಚಿಸಲಾಗಿರುವ ಸಂಸ್ಥೆ / ವ್ಯವಸ್ಥೆ ಹಾಗೂ ಕಾರ್ಯಕ್ರಮವನ್ನು, ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್‌ನ ಅನುಷ್ಠಾನಕ್ಕಾಗಿ ಇರುವ ವ್ಯವಸ್ಥೆಯನ್ನು ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ. ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

ಮೇಲಿನ ಆಯುಕ್ತಾಲಯಗಳ ಸೃಜನೆ, ಕಾರ್ಯ ವ್ಯವಸ್ಥೆ, ಸಿಬ್ಬಂದಿಗಳ ಸ್ಥಳಾಂತರ ಮುಂತಾದ ವಿಷಯಗಳ ಬಗ್ಗೆ **ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು** ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/9/16

**(ಚಂದ್ರಹಾಸ ಗಂ. ತಾಳೂಕರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

ಇವರಿಗೆ :

**ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ - ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಸಿ.ಆ.ಸು. ಇಲಾಖೆಗೆ ಒದಗಿಸಲು.**

108
33

<u>ಪ್ರತಿಗಳು :</u>

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ)/(ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
4) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ 1 ಮತ್ತು 2, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಕಾರ್ಮಿಕ ಇಲಾಖೆ, ವಿಕಾಸಸೌಧ.
6) ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು.
7) ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ, ವಿಧಾನಸೌಧ, ಬೆಂಗಳೂರು.
8) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು)
9) ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು)
10) ಸರ್ಕಾರದ ವಿಶೇಷ / ಅಪರ ಕಾರ್ಯದರ್ಶಿ (ಆಡಳಿತ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
11) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ) **ವಿಷಯ ಸಂಖ್ಯೆ ಸಿ/449/2016ರ ಮಾಹಿತಿಗಾಗಿ.**
12) ಸರ್ಕಾರದ ಉಪಕಾರ್ಯದರ್ಶಿ (ಸಿಬ್ಬಂದಿ), ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
13) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ 1, 2 & 3 : ಐಆರ್‌ಎಲ್‌ಎ) / (ಕಾರ್ಯಕಾರಿ) / (ಆಡಳಿತ-1, 2 & 3) (ಸಿಬ್ಬಂದಿ) / (ರಾಜ್ಯ ಶಿಷ್ಟಾಚಾರ) / ಸೇವೆಗಳು-1, 2, 3, 4, 5, 7
14) ಶಾಖಾ ರಕ್ಷಕ ಕಡತ.

5

(18)

44

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಃ ಕರ್ನಾಟಕ ಸರ್ಕಾರದ ಸಚಿವಾಲಯದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕ ಹಾಗೂ ಸ್ವೀಕೃತಿ ಮತ್ತು ರವಾನೆ ಶಾಖೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ ಃ 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 164 ಸಉಸೇ 2016 ದಿ:24.09.2016.
2. ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಡತ ಸಂಖ್ಯೆ: ಕೌಉಜೀಇ 164 ಕೈತಇ 2017.
3. ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಕೌಉಜೀಇ 65 ಕೈತಇ 2017, ದಿನಾಂಕ: 07-03-2017.

* * * * * *

ಪ್ರಸ್ತಾವನೆ ಃ

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಹೊಸದಾಗಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲಾಗಿದೆ. ಮೇಲೆ (2) ಹಾಗೂ (3)ರಲ್ಲಿ ಓದಲಾದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಸ್ತಾವನೆಯಲ್ಲಿ ಸದರಿ ಇಲಾಖೆಯಲ್ಲಿ ಪೂರಕ ಅಧಿಕಾರಿ/ಸಿಬ್ಬಂದಿ ವೃಂದದ ಹುದ್ದೆಗಳೊಂದಿಗೆ, ಹೊಸದಾಗಿ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕ ಹಾಗೂ ಸ್ವೀಕೃತಿ ಮತ್ತು ರವಾನೆ ಶಾಖೆಯನ್ನು ಸೃಜಿಸುವಂತೆ ಕೋರಲಾಗಿದೆ.

ಇಲಾಖೆಯು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ – ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ರಾಜ್ಯ ಸರ್ಕಾರವು ರಾಜ್ಯ ಯುವಜನತೆಗೆ ಯೋಗ್ಯ ಉದ್ಯೋಗಗಳನ್ನು ಹಾಗೂ ಅವಶ್ಯಕ ಕೌಶಲ್ಯಗಳನ್ನು ಹೊಂದಲು ಮತ್ತು ಸುಸ್ಥಿರ ಜೀವನೋಪಾಯಗಳನ್ನು ಪ್ರೋತ್ಸಾಹಿಸಲು ಸೃಜಿಸಲಾಗಿದೆ, ಹಾಗೂ ಈ ಇಲಾಖೆಯ ಕಾರ್ಯಚಟುವಟಿಕೆಗಳು ಬೃಹತ ಪ್ರಮಾಣದ್ದಾಗಿದ್ದು, ಇಲಾಖೆಯ ಪ್ರಕಾರ್ಯಗಳಾದ – ತರಬೇತಿ ಮೂಲ ಸೌಕರ್ಯ ಅಭಿವೃದ್ಧಿ ವೃತ್ತಿ ಮಾರ್ಗದರ್ಶನ, ಸ್ಟಾರ್ಟ್‌ಅಪ್ ಕಂಪನಿಗಳನ್ನು ಬೆಂಬಲಿಸುವುದು, ಯುವ ಜನತೆಗೆ ತರಬೇತಿ ನೀಡುವುದು ಹಾಗೂ ಉದ್ಯೋಗ ನಿಯುಕ್ತಿ, ವೃತ್ತಿ ಮಾರ್ಗದರ್ಶನ, ಸಮಾಲೋಚನೆ, ವಿದೇಶಿ ಉದ್ಯೋಗ ಸೇವೆಗಳು, ತರಬೇತಿದಾರರಿಗೆ ತರಬೇತಿ, ಕಾರ್ಮಿಕ ಮಾರುಕಟ್ಟೆ ಹಾಗೂ ಇತರೆ ಮಾಹಿತಿ ವ್ಯವಸ್ಥೆ, ವಿವಿಧ ಸರ್ಕಾರಿ ಸಂಸ್ಥೆಗಳೊಂದಿಗೆ ಸಮನ್ವಯ, ಕೈಗಾರಿಕೆಗಳೊಂದಿಗೆ ಸಂಪರ್ಕ ಮುಂತಾದವುಗಳನ್ನು ನಿರ್ವಹಿಸಬೇಕಾಗಿರುವುದರಿಂದ ಈ ಇಲಾಖೆಗೆ ಯೋಜನೆ ಅನುಷ್ಠಾನ ಮತ್ತು ಉಸ್ತುವಾರಿ ಘಟಕವನ್ನು ಈ ಕೆಳಕಂಡ ಪೂರಕ ಸಿಬ್ಬಂದಿ /ಆಯವ್ಯಯದೊಂದಿಗೆ ಸ್ಥಾಪಿಸುವುದು ಅವಶ್ಯಕವೆಂದು ಪ್ರಸ್ತಾಪಿಸಿದೆ.

43

**ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕ**

| ಕ್ರ. ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ | ನೇಮಕಾತಿ | ವೇತನ ಶ್ರೇಣಿ | ಮಾಸಿಕ ವೇತನ | ಒಟ್ಟು |
|---|---|---|---|---|---|---|
| 1 | ಜಂಟಿ ನಿರ್ದೇಶಕರು | 1 | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆಯ ಮೇರೆಗೆ | 40050-56550 | 75000 | 900000 |
| 2 | ಸಹಾಯಕ ಸಾಂಖ್ಯಿಕ ಅಧಿಕಾರಿ | 2 | | 20000-36300 | 35000 | 840000 |
| 3 | ಸಾಂಖ್ಯಿಕ ನಿರೀಕ್ಷಕರು | 1 | | 14550-26700 | 30000 | 360000 |
| 4 | ಶೀಘ್ರಲಿಪಿಗಾರರು | 1 | ಸಿಆಸುಇ ಯಿಂದ ನಿಯೋಜನೆಯ ಮೇರೆಗೆ ಅಥವಾ ಹೊರಗುತ್ತಿಗೆ | 14550-26700 | 20000 | 240000 |
| 5 | ಬೆರಳಚ್ಚುಗಾರರು | 1 | | 11600-21000 | 14000 | 168000 |
| 6 | ಗ್ರೂಪ್ 'ಡಿ' ವೃಂದ ನೌಕರರು | 3 | | 9600-14550 | 12000 | 432000 |
| 7 | ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 1 | ಹೊರಗುತ್ತಿಗೆ | - | 75000 | 900000 |
| 8 | ಸಾದಿಲ್ವಾರು ವೆಚ್ಚ | | - | - | - | 240000 |
| 9 | ಪ್ರವಾಸ ವೆಚ್ಚ | | - | - | - | 200000 |
| | ಒಟ್ಟು | | | | | 42800000 |

ಮುಂದುವರೆದು, ರಾಜ್ಯ ಸರ್ಕಾರವು ಹೊಸದಾಗಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಎನ್.ಆರ್.ಎಲ್.ಎಂ. ಆರ್‌ಸೆಟಿ, ನಗರಾಭಿವೃದ್ಧಿ ಇಲಾಖೆಯಿಂದ ಎನ್.ಯು.ಎಲ್.ಎಂ., ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಜಿ.ಟಿ.ಟಿ.ಸಿ. ಹಾಗೂ ಸಿಡಾಕ್, ಕಾರ್ಮಿಕ ಇಲಾಖೆಯಿಂದ ಉದ್ಯೋಗ ಮತ್ತು ತರಬೇತಿ ಇಲಾಖೆ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ನಿರ್ಮಾಣ ಅಕಾಡೆಮಿಯನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ತರಲಾಗಿದೆ. ಹಾಗಾಗಿ ಇಲಾಖೆಯ ಕಾರ್ಯವ್ಯಾಪ್ತಿ ವಿಸ್ತಾರವಾಗಿದ್ದು, ಒಟ್ಟು 05 ಕ್ಷೇತ್ರ ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಇಲಾಖೆಗೆ ಪ್ರತ್ಯೇಕವಾದ ಸ್ವೀಕೃತಿ ಮತ್ತು ರವಾನೆ ಶಾಖೆಯನ್ನು ಈ ಕೆಳಕಂಡ ಪೂರಕ ಸಿಬ್ಬಂದಿಯೊಂದಿಗೆ ಸೃಜಿಸಲು ಪ್ರಸ್ತಾಪಿಸಿದೆ.

**ಸ್ವೀಕೃತಿ ಮತ್ತು ರವಾನೆ ಶಾಖೆ**

| ಕ್ರ. ಸಂ | ಹುದ್ದೆ | ಹುದ್ದೆಗಳ ಸಂಖ್ಯೆ |
|---|---|---|
| 1 | ಶಾಖಾಧಿಕಾರಿ | 1 |
| 2 | ಸಹಾಯಕರು | 2 |
| 3 | ಕಿರಿಯ ಸಹಾಯಕರು | 2 |
| 4 | ಬೆರಳಚ್ಚುಗಾರರು | 1 |
| 5 | ಗ್ರೂಪ್-ಡಿ | 1 |

ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಇಲಾಖೆಯಲ್ಲಿ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕ ಹಾಗೂ ಸ್ವೀಕೃತಿ ಮತ್ತು ರವಾನೆ ಶಾಖೆಯನ್ನು ಪೂರಕ ಸಿಬ್ಬಂದಿಯೊಂದಿಗೆ ಸೃಜಿಸಿ ಈ ಕೆಳಕಂಡಂತೆ ಆದೇಶಿಸಿ

3
(16)
42

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 164 ಸಲುಸೇ 2016,

ಬೆಂಗಳೂರು, ದಿನಾಂಕ 06.01.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (Department for Skill Development, Entrepreneurship and Livelihood)ಯಲ್ಲಿ ಈ ಕೆಳಕಂಡ ಪೂರಕ ಅಧಿಕಾರಿ/ಸಿಬ್ಬಂದಿಯೊಂದಿಗೆ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕವನ್ನು ಸೃಜಿಸಲಾಗಿದೆ.

ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ ಘಟಕ

(Planning, Implementation and Monitoring Unit)

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಜಂಟಿ ನಿರ್ದೇಶಕರು | 01 | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ ಮೇರೆಗೆ |
| 2 | ಸಹಾಯಕ ಸಾಂಖ್ಯಿಕ ಅಧಿಕಾರಿ | 01 | |
| 3 | ಸಾಂಖ್ಯಿಕ ನಿರೀಕ್ಷಕರು | 01 | |
| 4 | ಶೀಘ್ರಲಿಪಿಗಾರರು | 01 | ಹೊರಗುತ್ತಿಗೆ ಆಧಾರದ ಮೇಲೆ |
| 5 | ಬೆರಳಚ್ಚುಗಾರರು | 01 | |
| 6 | ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 01 | |
| 7 | ಗ್ರೂಪ್-ಡಿ | 02 | |
| | ಒಟ್ಟು | 08 | |

ಮುಂದುವರೆದು, ಸಚಿವಾಲಯದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಯೊಂದಿಗೆ ಸ್ವೀಕೃತಿ ಮತ್ತು ರವಾನೆ ಶಾಖೆಯನ್ನು ಸೃಜಿಸಲಾಗಿದೆ.

ಸ್ವೀಕೃತಿ ಮತ್ತು ರವಾನೆ ಶಾಖೆ

| ಕ್ರಮ ಸಂಖ್ಯೆ | ಹುದ್ದೆಗಳ ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಶಾಖಾಧಿಕಾರಿ | 01 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಸಹಾಯಕ | 02 | |
| 3 | ಕಿರಿಯ ಸಹಾಯಕ | 01 | |
| 4 | ಬೆರಳಚ್ಚುಗಾರರು | 01 | ಹೊರಗುತ್ತಿಗೆ ಆಧಾರದ ಮೇಲೆ |
| 5 | ಗ್ರೂಪ್-ಡಿ | 01 | |
| | ಒಟ್ಟು | 06 | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 510 ವೆಚ್ಚ-9 /2017 ದಿನಾಂಕ:06.09.2017ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಚಂದ್ರಹಾಸ ಗಂ. ತಾಳೂಕರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

6/7

<u>ಇವರಿಗೆ :</u>

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ)/(ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ,
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ವಿಕಾಸಸೌಧ.
8) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು)
9) ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು)
10) ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಆಸುಇ ಇಲಾಖೆ / ಅಪರ ಕಾರ್ಯದರ್ಶಿ (ಆಡಳಿತ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
11) ಸರ್ಕಾರದ ಉಪಕಾರ್ಯದರ್ಶಿ (ಸಿಬ್ಬಂದಿ), ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
12) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, (ಸಚಿವ ಸಂಪುಟ) ಶಾಖೆ, (ವಿಷಯ ಸಂಖ್ಯೆ:ಸಿ.01/2018)
13) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9),
14) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ 1, 2 & 3 : ಐಆರ್ಎಲ್ಎ) / (ಕಾರ್ಯಕಾರಿ) / (ಆಡಳಿತ-1, 2 & 3) (ಸಿಬ್ಬಂದಿ)/
15) ಶಾಖಾ ರಕ್ಷಕ ಕಡತ.

ಕರ್ನಾಟಕ ಸರ್ಕಾರ

ಸಂಖ್ಯೆ: ಕೌಉಜೀಇ 58 ಕೈತಸೇ 2017

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 05/08/2017

## ಅಧಿಕೃತ ಜ್ಞಾಪನ

ವಿಷಯ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಿಬ್ಬಂದಿಗಳಿಗೆ ಕಾರ್ಯಹಂಚಿಕೆ ಕುರಿತು.

* * * *

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಿಬ್ಬಂದಿಗಳಿಗೆ ದಿನಾಂಕ: 10.04.2017 ರಲ್ಲಿ ಹಂಚಿಕೆ ಮಾಡಿದ್ದ ವಿಷಯಗಳನ್ನು ಮರುಹಂಚಿಕೆ ಮಾಡಿ ಈ ಕೆಳಕಂಡಂತೆ ಕಾರ್ಯ ನಿರ್ವಹಿಸಲು ಸೂಚಿಸಿದೆ.

### ಶಾಖೆ-1

| ಕ್ರ.ಸಂ. | ಸಿಬ್ಬಂದಿಗಳು | ಹಂಚಿಕೆ ಮಾಡಿದ ವಿಷಯಗಳು |
|---|---|---|
| 1. | ಹಿರಿಯ ಸಹಾಯಕರು | 1. ಉದ್ಯೋಗ ಮತ್ತು ತರಬೇತಿ ಇಲಾಖೆ ಮತ್ತು ಶಿಶಿಕ್ಷು ಇಲಾಖೆ, ಗ್ರೂಪ್-ಎ ವೃಂದದ ಎಲ್ಲಾ ಸೇವಾ ವಿಷಯ ಹಾಗೂ ವಿಚಾರಣೆಗಳು, ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯಗಳು.<br>2. ಕೈಗಾರಿಕಾ ಮತ್ತು ಶಿಶಿಕ್ಷು ಇಲಾಖೆಗೆ ಸಂಬಂಧಿಸಿದ ಪರೀಕ್ಷಾ ಕಾರ್ಯಗಳ ಬಗ್ಗೆ.<br>3. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು. |
| 2. | ಸಹಾಯಕರು-1 | 1. ಉದ್ಯೋಗ ಮತ್ತು ತರಬೇತಿ ಇಲಾಖೆ ಮತ್ತು ಶಿಶಿಕ್ಷು ಇಲಾಖೆ, ಗ್ರೂಪ್-ಬಿ ವೃಂದದ ಎಲ್ಲಾ ಸೇವಾ ವಿಷಯ ಹಾಗೂ ವಿಚಾರಣೆಗಳು, ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯಗಳು.<br>2. ಎಸ್.ಸಿ.ಪಿ / ಟಿ.ಎಸ್.ಪಿ / ಎಸ್.ಡಿ.ಪಿ / ಆರ್.ಐ.ಡಿ.ಎಫ್ ಗೆ ಸಂಬಂಧಿಸಿದ ಎಲ್ಲಾ ವಿಷಯಗಳು.<br>3. ಸರ್ಕಾರಿ / ಅನುದಾನ ಸಹಿತ / ಅನುದಾನ ರಹಿತ ಐ.ಟಿ.ಐ. ಕಾಲೇಜುಗಳಿಗೆ ಸಂಬಂಧಿಸಿದ ಸೇವಾ ವಿಷಯಗಳು ಹಾಗೂ ಇತರೆ ವಿಷಯಗಳು.<br>4 ಸಿ ಅಂಡ್ ಆರ್ ರೂಲ್ಸ್.<br>5. ಕೇಂದ್ರ ಪುರಸ್ಕೃತ ಯೋಜನೆ.<br>6. ಎಲ್ಲಾ ಐ.ಟಿ.ಐ. ಕಾಲೇಜು ಕಟ್ಟಡಗಳ ನಿರ್ಮಾಣ ಹಾಗೂ ಖರೀದಿ ಮತ್ತು ಸಂಗ್ರಹಣೆ ಪ್ರಕ್ರಿಯೆಗಳು<br>7. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು.<br>8. ಅಂತರ್ ಇಲಾಖಾ ಆಡಳಿತ ವಿಷಯಗಳು. |

| | | |
|---|---|---|
| 3. | ಸಹಾಯಕರು–2 | 1. ಉದ್ಯೋಗ ಮತ್ತು ತರಬೇತಿ ಇಲಾಖೆ ಮತ್ತು ಶಿಶಿಕ್ಷು ಇಲಾಖೆ, ಗ್ರೂಪ್–ಸಿ ವೃಂದದ ಎಲ್ಲಾ ಸೇವಾ ವಿಷಯ ಹಾಗೂ ವಿಚಾರಣೆಗಳು, ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯಗಳು.<br>2. ಕೆ.ವಿ.ಟಿ.ಎಸ್.ಡಿ.ಸಿ. ಗೆ ಸಂಬಂಧಿಸಿದ ಸೇವಾ ವಿಷಯಗಳು ಹಾಗೂ ಉದ್ಯೋಗ ಮೇಳಗಳು.<br>3. ಕೆ.ಜಿ.ಎಂ.ಎಸ್.ಡಿ.ಸಿ. ಮತ್ತು ಕೆ.ಜಿ.ಟಿ.ಟಿ.ಐ.ಗೆ ಸಂಬಂಧಿಸಿದ ಎಲ್ಲಾ ವಿಷಯಗಳು.<br>4. ಇಲಾಖೆಯ ಆಯವ್ಯಯ ಮತ್ತು ತ್ರೈಮಾಸಿಕ ಅನುದಾನ ಬಿಡುಗಡೆ.<br>5. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು.<br>6. ಇತರೆ ಹೆಚ್ಚುವರಿ ವಿಷಯಗಳು. |

**ಶಾಖೆ–2**

| ಕ್ರ.ಸಂ. | ಸಿಬ್ಬಂದಿಗಳು | ಹಂಚಿಕೆ ಮಾಡಿದ ವಿಷಯಗಳು |
|---|---|---|
| 1. | ಹಿರಿಯ ಸಹಾಯಕರು | 1. ಜಿ.ಟಿ.ಟಿ.ಸಿ.<br>2. ಸಿಡಾಕ್<br>3. ಕೌಶಲ್ಯ ಮಿಷನ್<br>4. ಸ್ಕಿಲ್ ಪಾಲಿಸಿ<br>5. Skill procurement Agency<br>6. ಅಧಿಕಾರಯುಕ್ತ ಸಮಿತಿ ಮತ್ತು ಸ್ಕ್ರೂಟನಿ ಸಮಿತಿ ಸಭೆಗಳು.<br>7. ಜಿಲ್ಲಾ ಕೌಶಲ್ಯ ಮಿಷನ್<br>8. ಜಿಲ್ಲಾ ಸ್ಕಿಲ್ ಮಿಷನ್<br>9. ಎಸ್.ಸಿ.ಪಿ / ಟಿ.ಎಸ್.ಪಿ / ಎಸ್.ಡಿ.ಪಿ ಮತ್ತು ಆರ್.ಐ.ಡಿ.ಎಫ್ ಗೆ ಸಂಬಂಧಿಸಿದ ಎಲ್ಲಾ ವಿಷಯಗಳು.<br>10. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು. |
| 2. | ಸಹಾಯಕರು–1 | 1. ಎನ್.ಯು.ಎಲ್.ಎಂ.<br>2. ಸಿ.ಎಂ. ಡ್ಯಾಶ್ ಬೋರ್ಡ್<br>3. ಇಲಾಖೆಯ ವೆಬ್ ಸೈಟ್<br>4. ಪಿ.ಎಂ.ಕೆ.ವಿ.ವೈ.<br>5. ಮುಖ್ಯ ಮಂತ್ರಿಗಳ ಕೌಶಲ್ಯ ಯೋಜನೆ<br>6. ಸಿ.ಎಂ.ಕೆ.ಎಲ್.ಎಸ್ ಲೋಕಲ್ ಟು ಗ್ಲೋಬಲ್<br>7. Establishment of Karnataka Skill Mission Fund, Scheme for Capital Funding to |

| | | |
|---|---|---|
| | | Government and Private Skill Training institutions, Skill Bureau.<br>8. NSQF.<br>9. Setting up of construction Academy and study on construction workers by E&Y.<br>10. ಕೇಂದ್ರ ಪುರಸ್ಕೃತ ಯೋಜನೆ ಎಸ್.ಸಿ.ಪಿ / ಟಿ.ಎಸ್.ಪಿ<br>11. ಎಲ್ಲಾ ಇಲಾಖೆಗಳ ತ್ರೈಮಾಸಿಕ ಅನುದಾನವನ್ನು ಖಜಾನೆಯಿಂದ ಬಿಡುಗಡೆ ಮಾಡುವುದು.<br>12. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು. |
| 3. | ಸಹಾಯಕರು–2 | 1. ಎನ್.ಆರ್.ಎಲ್.ಎಂ.<br>2. ಹೆಚ್.ಕೆ.ಆರ್.ಡಿ.ಬಿ.<br>3. Domestic and Street Vendors<br>4. SCP & TSP<br>5. ಕೇಂದ್ರ ಪುರಸ್ಕೃತ ಯೋಜನೆ<br>6. SDP, Procurement<br>7. Devaraju Urs Skill Academy<br>8. Carrier, Guidelines & Counseling.<br>9. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು.<br>8. ಇತರೆ ಹೆಚ್ಚುವರಿ ವಿಷಯಗಳು. |
| 4. | ಶ್ರೀಮತಿ ಪ್ರತಿಭಾ | 1. Flagship programmes<br>2. CM Dash board<br>3. MMR & CS KDP's, ಮತ್ತು ಇಲಾಖೆಯ ಪ್ರಗತಿ ಸಭೆ.<br>4. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆ, ವಿಧಾನಸಭೆ / ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆ, ಕಾಗದ ಪತ್ರಗಳ ಸಮಿತಿ ಪ್ರಶ್ನೆಗಳು. |

ಮೇಲಿನ ವಿಷಯಗಳನ್ನು ಹೊರತುಪಡಿಸಿ ಮೇಲಾಧಿಕಾರಿಗಳು ಸೂಚಿಸಿದ ಕಾರ್ಯಗಳು.

5/8

(ಶಿವಲಿಂಗ),
ಸರ್ಕಾರದ ಉಪ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಪ್ರತಿ:–

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀ ಮತ್ತು ಜೀವನೋಪಾಯ ಇಲಾಖೆ.

2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
4. ಶಾಖಾಧಿಕಾರಿ–1, ಉದ್ಯೋಗ ಮತ್ತು ತರಬೇತಿ.
5. ಶಾಖಾಧಿಕಾರಿ–2, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
6. ಶ್ರೀ ಎಸ್.ಎ.ಕಾತರಕಿ, ಸಮಾಲೋಚಕರು–1, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
7. ಶ್ರೀ ಬಿ.ಎಸ್. ಹಿರೇಮಠ, ಸಮಾಲೋಚಕರು–2, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
8. ಶ್ರೀ ಜಿಂಕಲಪ್ಪ, ಸಮಾಲೋಚಕರು–3, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
9. ಶ್ರೀ ಅನ್ವರ್ ಪಾಷ, ಸಮಾಲೋಚಕರು–4, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
10. ಸಂಬಂಧಿತ ವಿಷಯ ನಿರ್ವಾಹಕರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರದ ಸಚಿವಾಲಯದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಯೋಜನೆ ಅನುಷ್ಠಾನ ಮತ್ತು ಉಸ್ತುವಾರಿ ಘಟಕದ ಜಂಟಿ ನಿರ್ದೇಶಕ ಹಾಗೂ ಪೂರಕ ಸಿಬ್ಬಂದಿಗೆ ಕಾರ್ಯ ಹಂಚಿಕೆ.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 164 ಸಉಸೇ 2016, ದಿ: 06.01.2018
2. ಕಚೇರಿ ಆದೇಶ ಸಂಖ್ಯೆ: ಆಡಳಿತ-1/699/2019-20, ದಿ:31.01.2020

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರನ್ವಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಯೋಜನೆ ಅನುಷ್ಠಾನ ಮತ್ತು ಉಸ್ತುವಾರಿ ಘಟಕದಲ್ಲಿ ಒಬ್ಬ ಜಂಟಿ ನಿರ್ದೇಶಕರು ಹಾಗೂ ಪೂರಕ ಸಿಬ್ಬಂದಿಗಳನ್ನು ಸೃಜಿಸಿ ಆದೇಶ ಹೊರಡಿಸಲಾಗಿದೆ. ಸದರಿ ಆದೇಶದನ್ವಯ ಒಬ್ಬ ಜಂಟಿ ನಿರ್ದೇಶಕರು ಹಾಗೂ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಜಂಟಿ ನಿರ್ದೇಶಕರು | 01 | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ ಮೇರೆಗೆ |
| 2 | ಸಹಾಯಕ ಸಾಂಖ್ಯಿಕ ಅಧಿಕಾರಿ | 01 | |
| 3 | ಸಾಂಖ್ಯಿಕ ನಿರೀಕ್ಷಕರು | 01 | |
| 4 | ಶೀಘ್ರಲಿಪಿಗಾರರು | 01 | ಹೊರಗುತ್ತಿಗೆ ಆಧಾರದ ಮೇಲೆ |
| 5 | ಬೆರಳಚ್ಚುಗಾರರು | 01 | |
| 6 | ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 01 | |
| 7 | ಗ್ರೂಪ್-ಡಿ | 02 | |
| | **ಒಟ್ಟು** | **08** | |

ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ 1 – 3 ರ ಹುದ್ದೆಗಳನ್ನು ನಿಯೋಜಿಸಲು ದಿನಾಂಕ: 24.03.2018 ರಂದು ಕೋರಲಾಗಿತ್ತು. ಇದರನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಕಚೇರಿ ಆದೇಶದಲ್ಲಿ ಶ್ರೀ ರಾಮಚಂದ್ರ ಹೆಗಡೆ, ಜಂಟಿ ನಿರ್ದೇಶಕರನ್ನು ಮಾತ್ರ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಿಂದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ನಿಯೋಜಿಸಲಾಗಿದೆ. ಸದರಿ ಅಧಿಕಾರಿಯವರು ಪ್ರಸ್ತುತ ಇರುವ ಸಿಬ್ಬಂದಿಗಳ ಸಹಯೋಗದೊಂದಿಗೆ ಇಲಾಖೆಯ ಯೋಜನಾ ಅನುಷ್ಠಾನ ಮತ್ತು ಉಸ್ತುವಾರಿ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಈ ಬಗ್ಗೆ ಪರಿಶೀಲಿಸಿ ಉಸ್ತುವಾರಿ ಘಟಕದ ಕಾರ್ಯ ಹಂಚಿಕೆಯನ್ನು ಮಾಡಲಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 171 ಕೌಗುಇ 2020 ಬೆಂಗಳೂರು,**
**ದಿನಾಂಕ: 06.11.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಯೋಜನೆ ಅನುಷ್ಠಾನ ಮತ್ತು ಉಸ್ತುವಾರಿ ಘಟಕದ ಜಂಟಿ

ನಿರ್ದೇಶಕರು ಪ್ರಸ್ತುತ ಇರುವ ಸಿಬ್ಬಂದಿಗಳ ಸಹಯೋಗದೊಂದಿಗೆ ಇಲಾಖೆಯ ಯೋಜನಾ ಅನುಷ್ಠಾನ ಮತ್ತು ಉಸ್ತುವಾರಿ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಉಸ್ತುವಾರಿ ಘಟಕವು ವಹಿಸಬೇಕಾದ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿವೆ.

1. ಕೌಶಲ್ಯ ಕರ್ನಾಟಕ ಮಾಸ ಪತ್ರಿಕೆಯ ಲೇಖನಗಳನ್ನು ಸಂಗ್ರಹಿಸಿ ಇದನ್ನು ನಿಯತಕಾಲಿಕವಾಗಿ ಮುದ್ರಿಸುವುದು.
2. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಎಲ್ಲಾ ಅಂಗ ಇಲಾಖೆ / ಸಂಸ್ಥೆಗಳ MPIC ವರದಿಗಳನ್ನು ಪಡೆದು DSS ನಲ್ಲಿ ಅಳವಡಿಸಿ MPIC ಸಭೆಗೆ ಮಾಹಿತಿಯನ್ನು ಒದಗಿಸುವುದು ಹಾಗೂ ಸಭೆಯ ನಡವಳಿಗಳನ್ನು ತಯಾರಿಸಿ ಅನುಮೋದನೆಗೆ ಮಂಡಿಸುವುದು.
3. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕುರಿತಾದ KDP ಸಭೆಗೆ ಸಂಬಂದಿತ ಮಾಹಿತಿಯನ್ನು ಸಂಗ್ರಹಿಸಿ ಒದಗಿಸುವುದು.
4. ಇಲಾಖೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿ ಜನ ಉಪ ಯೋಜನೆಯ ಮಾಸಿಕ ವರದಿಗಳನ್ನು ಕ್ರೋಢೀಕರಿಸಿ ಸಲ್ಲಿಸುವುದು.
5. ಇಲಾಖೆಯ SDP ಯೋಜನೆಯ ಮಾಸಿಕ ವರದಿಗಳನ್ನು ಕ್ರೋಢೀಕರಿಸಿ ಸಲ್ಲಿಸುವುದು.
6. ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ದೀರ್ಘಾವಧಿ ಕೌಶಲ್ಯ ತರಬೇತಿ ಮಾಹಿತಿ ಹಾಗೂ ಕೆ.ಎಸ್.ಡಿ.ಸಿ. / ಎನ್.ಆರ್.ಎಲ್.ಎಂ. / ಎನ್.ಯು.ಎಲ್.ಎಂ. / ಜಿ.ಟಿ.ಟಿ.ಸಿ. / ಕೆ.ಜಿ.ಎಂ.ಎಸ್.ಡಿ.ಎಸ್. / ಸಿಡಾಕ್ ವತಿಯಿಂದ ನಡೆಸಲಾಗುತ್ತಿರುವ ಅಲ್ಪಾವಧಿ ಕೌಶಲ್ಯ ತರಬೇತಿ ಕಾರ್ಯಕ್ರಮದ ಬಗ್ಗೆ ತರಬೇತುದಾರ ಹಾಗೂ ತರಬೇತಿ ಪ್ರಗತಿಯ ಅಂಕಿ ಅಂಶದ ಮಾಹಿತಿಯನ್ನು ಸಂಗ್ರಹಿಸಿ ಸಲ್ಲಿಸುವುದು.
7. ಇಲಾಖೆಯ ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ಹಾಗೂ ಹಣ ವಿನಿಯೋಗ ಪ್ರಮಾಣ ಪತ್ರದ ಮಾಹಿತಿಯನ್ನು ಸಂಗ್ರಹಿಸಿ ಸಲ್ಲಿಸುವುದು.
8. ಇಲಾಖೆಯ ವಾರ್ಷಿಕ ಕಾರ್ಯನಿರ್ವಾಹಣಾ ವರದಿ ಹಾಗೂ ವಾರ್ಷಿಕ ವರದಿಗಳನ್ನು ತಯಾರಿಸುವುದು.
9. ವಾರ್ಷಿಕ ಆರ್ಥಿಕ ಸಮೀಕ್ಷೆ ವರದಿಯನ್ನು ತಯಾರಿಸುವುದು.
10. ಕಾರ್ಯದರ್ಶಿಗಳಿಂದ ವಹಿಸಲಾದ ಇನ್ನಿತರ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

6/11/2020

**(ರಂಗನಾಥ)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಇಲಾಖೆ**

**ಇವರಿಗೆ:**

1) ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿ, ಸಿಆಸುಇ, ವಿಧಾನಸೌಧ ಬೆಂಗಳೂರು.
6) ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಸೇವೆಗಳು), ಬೆಂಗಳೂರು.
7) ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯ ಭವನ, ಬೆಂಗಳೂರು.
9) ಮಿಷನ್ ನಿರ್ದೇಶಕರು, ಜೀವನೋಪಾಯ, ಬೆಂಗಳೂರು.
10) ವ್ಯವಸ್ಥಾಪಕ ನಿರ್ದೇಶಕರು, ಜಿಟಿಟಿಸಿ, ಬೆಂಗಳೂರು.
11) ಜಂಟಿ ಕಾರ್ಯದರ್ಶಿ, ಕೆ.ಜಿ.ಎಂ.ಎಸ್.ಡಿ.ಎಸ್., ಬೆಂಗಳೂರು.
12) ನಿರ್ದೇಶಕರು, ಸಿಡಾಕ್, ಧಾರವಾಡ.
13) ಜಂಟಿ ನಿರ್ದೇಶಕರು, ಕೌಉಜೀ ಇಲಾಖೆ
14) ಆಂತರಿಕ ಆರ್ಥಿಕ ಸಲಹೆಗಾರರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ವಿಕಾಸಸೌಧ, ಬೆಂಗಳೂರು.
15) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16) ನಿರ್ದೇಶಕರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
18) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
19) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.